ಕರ್ನಾಟಕ ವಿಧಾನಮಂಡಲ ಗ್ರಂಥಾಲಯ,
ಬೆಂಗಳೂರು. Bangalore.
Date.....

ಶ್ರೀ ಜಿ. ಬಿ. ಶಂಕರರಾವ್ (ವಿದ್ಯಾ ಸಚಿವರು).— ಸರ್ಕಾರದ ನೀತಿಯ ಪ್ರಕಾರ ೨ ಸಾವಿರಕ್ಕಿಂತ ಹೆಚ್ಚಿಗೆ ವಿದ್ಯಾರ್ಥಿಗಳು ಒಂದು ಕಾಲೇಜಿನಲ್ಲಿದ್ದರೆ ೨ ಕಾಲೇಜುಗಳಾಗಿ ಅದನ್ನು ಪರಿವರ್ತಿಸಬೇಕೆಂಬ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಅದೇ ರೀತಿಯಾಗಿ ಪೂರ್ವಭಾವಿ ಕ್ರಮಗಳನ್ನೂ ಕೂಡ ಕೈಗೊಳ್ಳುತ್ತಿದ್ದೇವೆ. We have been working out the preliminaries which the hon Member is aware of. ಬಿ.ಎ., ಬಿ.ಎಸ್ಸಿ., ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಹೆಚ್ಚಿಲ್ಲ. ಹೆಚ್ಚುವರಿ ತರಗತಿಗಳನ್ನು ತೆರೆಯುವುದಕ್ಕೆ ಅವಕಾಶವನ್ನು ಮಾಡಿಕೊಡಿ ಎಂದೂ ತಾವು ಕೇಳುತ್ತಿದ್ದೀರಿ. ಇದನ್ನು ನಾವು ಮಾಡಿಕೊಡುತ್ತಿದ್ದೇವೆ. ಇವತ್ತೇ ದೂರವಾಣಿ ಮೂಲಕ ಸಂಬಂಧಪಟ್ಟವರನ್ನು ಸಂಪರ್ಕಿಸಿ ಇವತ್ತಿನಿಂದಲೇ ಹೆಚ್ಚುವರಿ ತರಗತಿಗಳನ್ನು ತೆರೆಯಬೇಕೆಂದು ಆದೇಶ ಕೊಡುತ್ತೇನೆಂದು ತಮಗೆ ಭರವಸೆ ಕೊಡಬಯಸುತ್ತೇನೆ.

Representation by Members

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ ಗ್ರಾಮಾಂತರ).— ಮಾನ್ಯ ಅಧ್ಯಕ್ಷರೆ, ನಾನು ನಿಯಮ ೩೧೨ರ ಕೆಳಗೆ ತಮಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ. ಒಬ್ಬ ರಾಜ್ಯಸಭಾ ಸದಸ್ಯರು ಆಪಾದನೆಗಳಿಗೆ ಒಳಗಾಗಿರತಕ್ಕ ವಿಚಾರವನ್ನು ಈ ಸಭೆಯಲ್ಲಿ ನಿನ್ನೆಯ ದಿವಸ ನಾನು ಎತ್ತಿದ್ದೆ. ಆಗ ಮಾನ್ಯ ಮಂಖ್ಯಮಂತ್ರಿಗಳು ಉತ್ತರವನ್ನು ಏನು ಕೊಟ್ಟರು ಎಂದರೆ, ಮಾನ್ಯ ಎಫ್.ಎಂ. ಖಾನ್‌ರವರ ಬಗ್ಗೆ ವಿಚಾರಣೆ ಆದಂಥ ಬ್ಯಾನರ್ಜಿಯವರ ರಿಪೋರ್ಟ್ ಮತ್ತು ಅವರು ಯಾರ್ಯಾರ ಸಾಕ್ಷ್ಯಗಳನ್ನು ತೆಗೆದುಕೊಂಡಿದ್ದರೋ ಆ ಎಲ್ಲ ವಿವರಗಳನ್ನೂ ಈ ಸದನಕ್ಕೆ ಒದಗಿಸುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ನಾನು ಈಗಾಗಲೇ ಒಂದು ಪತ್ರವನ್ನು ತಮಗೆ ಬರೆದು ಅದನ್ನು ಬೇಗ ತರಿಸಿಕೊಳ್ಳಬೇಕೆಂದು ಕೇಳಿಕೊಂಡಿದ್ದೇನೆ. ಆದ್ದರಿಂದ ತಾವು ಇದನ್ನು ದಯವಿಟ್ಟು ತರಿಸಿಕೊಳ್ಳಬೇಕು. ಸಿ.ಬಿ.ಐ.ನವರು ಮತ್ತು ರಾವ್‌ರವರು ಇದರ ಬಗ್ಗೆ ವಿಚಾರಣೆ ಮಾಡಿದ್ದಾರೆಯೇ ಎಂದು ನಾನು ಕೇಳಿದ್ದಕ್ಕೆ ಅದು ನನಗೆ ಗೊತ್ತಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆದರೆ ಇವತ್ತು ನನಗೆ ತಿಳಿದುಬಂದಂತೆ ಸಿ.ಬಿ.ಐ. ಆಫೀಸರ್‌ರವರು ಬೆಂಗಳೂರು ನಗರಕ್ಕೆ ಬಂದು ಈ ಪ್ರಕರಣಕ್ಕೆ ಸಂಬಂಧಪಟ್ಟ ವಿಚಾರಣೆಯನ್ನು ನಡೆಸುತ್ತಿದ್ದರು. ಇದರ ಜೊತೆಗೆ ಆ ಸಿ.ಬಿ.ಐ. ಅಧಿಕಾರಿಗಳ ಕಾರ್‌ನಲ್ಲಿ ಇದ್ದಂಥ ರಿಪೋರ್ಟ್‌ಗಳುವಾಗಿದೆ ಎಂದು ಗೊತ್ತಾಗಿದೆ. ಈ ಬಗ್ಗೆ ಅವರು ಒಂದು ದೂರನ್ನೂ ಕೂಡ ಕೊಟ್ಟಿದಾರೆಂದು ಕೇಳಲ್ಪಟ್ಟಿದ್ದೇನೆ.....

ಅಧ್ಯಕ್ಷರು.— ಮಾನ್ಯ ಸದಸ್ಯರಾದ ರಾಮದೇವ್‌ರವರೂ ಇದರ ಬಗ್ಗೆ ಪತ್ರವನ್ನು ಬರೆದಿದ್ದಾರೆ, ತಾವೂ ಬರೆದಿದ್ದೀರಿ, ಇದು ಕಾಲಿಂಗ್ ಅಟೆನ್‌ಷನ್‌ಆಗಿ ನಾಳೆ ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ — ನಾನುಏತಕ್ಕೆ ಈ ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ, ರಾವ್‌ರವರ ರಿಪೋರ್ಟ್ ಕೊಡಬೇಕೆಂದು ಹೇಳಿದಾಗ, ಕೇಂದ್ರ ಸರ್ಕಾರದಿಂದ ವಿಚಾರಣೆಗೆ ಬಂದಂಥ ಅಧಿಕಾರಿಗಳ ಹತ್ತಿರ ಇದ್ದಂಥ ರಿಪೋರ್ಟ್ ಕಳುವಾದ ಘಟನೆ ನಡೆದಿದೆ. ಅವರು ಇದರ ಬಗ್ಗೆ ಒಂದು ದೂರನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿಲ್ಲ ಎಂದು ಹೇಳಿದರು. ಮಾನ್ಯ ಎಫ್ ಎಂ. ಖಾನ್‌ರವರ ಹತ್ತಿರ ಒಂದು ವೈರ್‌ಲೆಸ್ ಸೆಟ್ ಇದೆಯಂತೆ ಎಂದು ನಾನು ಕೇಳಿದಾಗ ಅದು ಅವರ ಹತ್ತಿರ ಇಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆದ್ದರಿಂದ, ನಾನು ಸರ್ಕಾರವನ್ನು ಕೇಳಬಯಸುತ್ತೇನೆ, ಈ ವಿಚಾರದಲ್ಲಿ ರಾಜ್ಯದ ಐ.ಜಿ.ಪಿ.ಯವರ ರಿಪೋರ್ಟ್ ಏನಿದೆ ಅವರು ವೈರ್‌ಲೆಸ್ ಸೆಟ್‌ನ ಬಗ್ಗೆ ಏನಾದರೂ ರಿಪೋರ್ಟ್ ಮಾಡಿದ್ದಾರೆಯೆ ?

೧–೩೦ ಪಿ.ಎಂ.

ಮಾನ್ಯ ಅಧ್ಯಕ್ಷರೇ ನಾವು ೩೧೨ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೇವೆ ಒಬ್ಬ ರಾಜ್ಯಸಭಾ ಸದಸ್ಯರು ಆಪಾದನೆಗೆ ಒಳಗಾದುದನ್ನು ಈ ಸಭೆಯಲ್ಲಿ ಇಟ್ಟಿದ್ದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ನೆನ್ನೆ ಉತ್ತರವನ್ನು ಕೊಡುವಾಗ ಅವರ ಒಬ್ಬ ಆತ್ಮ ಗೆಳೆಯನನ್ನು ಇಕ್ಕಟ್ಟಿನಿಂದ ರಕ್ಷಣೆ ಕೊಡಬೇಕೆಂದು ಹೇಳಿ ಅದಕ್ಕೆ ಏನು ಮಾಡಬಹುದೋ ಅದನ್ನೆಲ್ಲ ಹೇಳಿಕೆ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಯಾವ ರೀತಿ ಉತ್ತರ ಕೊಡಬೇಕೋ ಆ ರೀತಿ ಕೊಟ್ಟಿಲ್ಲ. ಸಭೆಯನ್ನು ತಪ್ಪುದಾರಿಗೆ ಎಳೆಯತಕ್ಕಂಥ ಪ್ರಯತ್ನವಾಗಿದೆ.

ಅಧ್ಯಕ್ಷರು.— ಮಾನ್ಯ ಬೊಮ್ಮಾಯ್‌ರವರೇ ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಎಸ್. ಆರ್. ಬೊಮ್ಮಾಯಿ — ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಬಂದಂಥ ಆಫೀಸರ್‌ರವರ ಬ್ರೀಫ್‌ಕೇಸ್ ಹೋಗಿರುವುದು ಆಷ್ಟೇ ಅಲ್ಲ, ಅವರೂ ಕೂಡ ಹೋಗುತ್ತಿದ್ದರೋ ಏನೋ ಗೊತ್ತಿಲ್ಲ. ಈ ರಾಜ್ಯದಲ್ಲಿ ಸೂಪರ್ ಪೋಲೀಸ್ mafia gang ಏನಾದರೂ ಕೆಲಸ ಮಾಡುತ್ತಿದೆಯೇ ? ವೈರ್‌ಲೆಸ್ ಮುಖಾಂತರ ಸಿ.ಬಿ.ಐ. ಅಧಿಕಾರಿಗಳು ಎಲ್ಲಿ ಹೋಗುತ್ತಿದ್ದಾರೆ, ಏನೇನು ವಿಚಾರಣೆ ಮಾಡುತ್ತಿದ್ದಾರೆ ಎನ್ನುವುದನ್ನೆಲ್ಲ ತಿಳಿದುಕೊಂಡು ಅದನ್ನು ಮುಚ್ಚುತಕ್ಕಂಥ ಪ್ರಯತ್ನವೇನಾದರೂ ನಡೆಯುತ್ತಿದೆಯೇ ? There is a serious doubt.

ಅಧ್ಯಕ್ಷರು — ನಾಳೆ ಈ ವಿಷಯವನ್ನು ಪ್ರಸ್ತಾಪ ಮಾಡಬಹುದು.

SRI S. R. BOMMAI.— I would like to know what is the complaint of that C.B.I. Officer ? What is the report of the Inspector General of Police ? The Government should also furnish the details regarding the report of Mr. Banerjee and the witnesses examined by him. ಒಬ್ಬ ಸಿ.ಬಿ.ಐ. ಆಫೀಸರ್ ಈ ರಾಜ್ಯದಲ್ಲಿ ಬಂದು ವಿಚಾರಣೆ ಮಾಡುವುದಕ್ಕೂ ಕೂಡ ಅಡ್ಡಿ ಮಾಡಿ ಅದನ್ನು ಕಳವು ಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದರೆ ಈ ರಾಜ್ಯಕ್ಕೆ ಕೆಟ್ಟ ಹೆಸರು. We have got serious doubts that super-Government, super-police is working in the State which is not amenable to the arm of law.

FINANCIAL BUSINESS

Discussion on Demands for Grants for 1981-82

SRI M. VEERAPPA MOILY (Minister for Finance).— Sir, on behalf of the Minister for Planning and Wakfs, I beg to move.—

DEMAND NO. 42 AREA DEVELOPMENT AND OTHER ITEMS OF PLANNING DEPARTMENT

"That a sum not exceeding Rs. 11,57,96,000 on Revenue Account and Rs. 1,10,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Area Development and other items of Planning Department".

DEMAND NO. 53 WAKFS

"That a sum not exceeding Rs. 34,00,000 on Revenue Account inclusive of the sum granted 'on account, be granted to the Government to defray the charges which will come in course of payment during the financial year ending 31st day of March 1982 in respect of "Wakfs".

SRI A. B. JAKANUR (Minister for Labour).— Sir, on the recommendation of the Governor, I beg to move —

DEMAND NO. 60 LABOUR AND EMPLOYMENT

"That a sum not exceeding Rs. 14,23,87,000 on Revenue Account and Rs. 4,00,000 on Capital Account inclusive of the sum granted on